ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 120/2016

(ಚಾ.ಸಾ. 1 ಪ್ರಾ.ಸಾ. 1)
ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು
ದಿನಾಂಕಃ 05.03.2020

| | | |
|---|---|---|
| ಸಾಕ್ಷಿದಾರರ ಹೆಸರು | ಃ | ವೀಣಾ. ವಿ |
| ತಂದೆಯ/ಗಂಡನ ಹೆಸರು | ಃ | ಗೋವಿಂದರಾಜು |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ಗೃಹಿಣಿ |
| ವಾಸ | ಃ | ಯರ್ರನಪಾಳ್ಯ |

**ಮುಖ್ಯವಿಚಾರಣೆ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ** ನಾನು ಯರನ್ನಹಳ್ಳಿ ಗ್ರಾಮದ ವಾಸಿ. ನಾನು ಪರಿಶಿಷ್ಟ ಜಾತಿಯ ಭೋವಿ ಜಾತಿಗೆ ಸೇರಿದವಳು.. ನಮ್ಮ ಜಮೀನು ಮತ್ತು ಮನೆ ಮಂಟನಕುರಚಿ ಗ್ರಾಮದಲ್ಲಿದೆ. ಸರ್ವೆ ನಂ, 81 /1 ಮತ್ತು 82/1 ರಲ್ಲಿ 5 ಎಕರೆ ಜಮೀನು ಇದೆ. ನಾನು ರಜಿಯಾ ಬಿ, ಸೊಂಡೆಕೊಪ್ಪ ಗ್ರಾಮದ ವಾಸಿಯಿಂದ 7-8 ವರ್ಷಗಳ ಹಿಂದೆ ಜಮೀನು ಖರೀದಿ ಮಾಡಿದ್ದೆ. ಸದರಿ ಜಮೀನಿನ 2 ಎಕರೆಯಲ್ಲಿ ಹುರಳಿ 2 ಎಕರೆ ಯಲ್ಲಿ ಸೌತೆಕಾಯಿ ಬೆಳೆ ಬೆಳೆದಿದ್ದೆ . 15 x30 ವಿಸ್ತೀರ್ಣದಲ್ಲಿ 2 ಲೇಬರ್ ಶೆಡ್ ನಿರ್ಮಾಣ ಮಾಡಿದ್ದೆ. 60X40 ರಲ್ಲಿ ಮನೆ ನಿರ್ಮಾಣಕ್ಕೆ ಬೇಸ್ಮೆಂಟ್ ಹಾವಿದ್ದೆವು. ಜಮೀನಿನ ನೀರಿನ ವ್ಯವಸ್ಥೆಗೆ ಕೊಳವೆ ಬಾವಿ ಹಾಕಿಸಿದ್ದೆವು. ಜಮೀನಿನ ಸುತ್ತ ಕಲ್ಲು ಕೂಚಾ ಹಾಕಿಸಿ ಮುಳ್ಳು ತಂತಿ ಹಾಕಿಸಿದ್ದೆ. ಚಾ ಸಾ 4 ರನ್ನು ಜಮೀನಿನ ಮೇಲುಸ್ತುವಾರಿಗೆ ನೇಮಕ ಮಾಡಿದ್ದೆ.

2. ಚಾ ಸಾ 2 ರವರ ಮನೆ ನಮ್ಮ ಮನೆಯ ಪಕ್ಕದಲ್ಲಿದೆ. ನ್ಯಾಯಾಲಯದ ಮುಂದೆ ಹಾಜರಿರುವ 3ನೇ ಆರೋಪಿ ಗೊತ್ತು, 1, 2, 4 ರಿಂದ 13 ಆರೋಪಿಗಳು ಗೈರು ಹಾಜರಾಗಿದ್ದು ಹಾಜರಾತಿಗೆ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿದ್ದು ಆರೋಪಿಗಳ ಗುರುತಿಸುವಿಕೆಗಾಗಿ ಆರೋಪಿ ಪರ ವಕೀಲರಾದ ಆರ್. ಎಲ್. ಆರ್ ತಕರಾರು ಇಲ್ಲ ಎಂದು ನುಡಿದಿರುತ್ತಾರೆ. ಆರೋಪಿಗಳಲ್ಲಿ ಕೆಲವರು ಒಕ್ಕಲಿಗ ಜಾತಿಯವರು, ಕೆಲವರು ಮುಸಲ್ಮಾನ ಜಾತಿಗೆ ಸೇರಿದವರು.

3. ದಿಃ 10.12.2015 ರಂದು ನಾವು ಬೆಂಗಳೂರಿನ ಮನೆಯಲ್ಲಿ ವಾಸವಿದ್ದಾಗ ಚಾ ಸಾ 4 ನನಗೆ ಫೋನ್ ಮಾಡಿ 1 ನೇ ಆರೋಪಿ, ಅವರ ಮಗ ಮತ್ತು ಇತರ ಆರೋಪಿಗಳು ಬೆ 6 ರಿಂದ 8 ಗಂಟೆ ಸಮಯದಲ್ಲಿ ಅಕ್ರಮವಾಗಿ ಪ್ರವೇಶ ಮಾಡಿ ಬೆಳೆ ನಾಶ ಮಾಡಿ, ಮನೆಯ ಶೀಟು ಒಡೆದು ಹಾಕಿ, ಕಲ್ಲು ಕೂಚ ಮತ್ತು ಮುಳ್ಳುತಂತಿಯನ್ನು ಒಡೆದು ಹಾಕಿ ಮನೆ ಕಟ್ಟಲು ಹಾಕಿದ್ದ ಬೇಸ್ಮೆದಟ್ ಒಡೆದು ಹಾಕಿರುತ್ತಾರೆ ಎಂದು ತಿಳಿಸಿದರು. ಜೆಸಿಬಿಯಿಂದ ಮನೆಯ ಶೆಡ್ ಒಡೆದು ಹಾಕಿದ್ದು ಟ್ರಾಕ್ಟರ್ ನಿಂದ ಬೆಳೆ ನಾಶ ಮಾಡಿ 11 ಸಾವಿರ ಬೆಲೆ ಬಾಳುವ ನೀರಿನ ಮೋಟಾರನ್ನು ಆರೋಪಿಗಳು ತೆಗೆದುಕೊಂಡು ಹೋಗಿದ್ದರು ಎಂದು ತಿಳಿಸಿದ್ದರು.

4. ಅದೇ ದಿನ ಬೆಳಗ್ಗೆ 8 ಗಂಟೆಗೆ ಜಮೀನಿಗೆ ಹೋಗಿದ್ದೆವು. ಆರೋಪಿಗಳು ಬೆಳೆ ನಾಶ ಮಾಡಿ ಬೇಸ್ಮೆಂಟ್ ಒಡೆದು ಹಾಕುತ್ತಿದ್ದರು. ನಾನು ಆರೋಪಿಗಳನ್ನು ಈ ಬಗ್ಗೆ ಕೇಳಿದೆ. ಆರೋಪಿಗಳು ಈ ಜಮೀನು ನಮ್ಮದು, ನೀನು ಏಕೆ ಬಂದಿದ್ದೀಯಾ, ವಡ್ಡ ಮುಂಡೆ, ನಿನ್ನ ಅಮ್ಮನ ಕೇಯಾ ಎಂದು ಬೈದು ಕುತ್ತಿಗೆ ಹಿಡಿದು ದಬ್ಬಲು ಬಂದಿದ್ದರು. ಜಮೀನಿಗೆ ಕಾಲಿಟ್ಟರೆ ಕಾಲು ಮುರಿಯುತ್ತೇನೆ ಎಂದು ಹೇಳಿದ್ದರು. ಚಾ ಸಾ 2 ರಿಂದ 8 ರವರು ಗಲಾಟೆ ಬಿಡಿಸಿದ್ದರು. ನಂತರ ಸ್ಥಳಕ್ಕೆ ಬಂದಿದ್ದ ಆರೋಪಿಗಳು ಅವರ ಕಾರಿನಲ್ಲಿ ಹೊರಟು ಹೋಗಿದ್ದರು. ಸುಮಾರು 20 – 30 ಲಕ್ಷ ರೂ ನಷ್ಟ ಉಂಟಾಗಿತ್ತು, ನಂತರ ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದೆ. ಸಾಕ್ಷಿ ದೂರು ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು ಸಹಿಯನ್ನು ನಿಪಿ-1(ಎ) ಎಂದು ಗುರುತು ಮಾಡಲಾಯಿತು. ಜಮೀನಿಗೆ ಸಂಬಂಧಿಸಿದ ದಾಖಲಾತಿಗಳ ಪ್ರತಿಯನ್ನು ಪೊಲೀಸರಿಗೆ ನೀಡಿದ್ದೇನೆ.

5. ಜಮೀನಿಗೆ ಸಂಬಂಧಿಸಿದ ಎಂ. ಆರ್. ದೃಢೀಕೃತ ನಕಲನ್ನು ಪೊಲೀಸರಿಗೆ ನೀಡಿದ್ದು ಸಾಕ್ಷಿ ಸದರಿ ದಾಖಲಾತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಗುರುತು ಮಾಡಲಾಯಿತು. ದೂರು ಕೊಟ್ಟ ನಂತರ ಪೊಲೀಸರು ಜಮೀನಿನ ಬಳಿಗೆ ಬಂದಿದ್ದರು. ಸ್ಥಳದಲ್ಲಿ ಮಹಜರ್ ಮಾಡಿದ್ದರು. ಸಾಕ್ಷಿಗೆ ಮಹಜರ್ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಸಾಕ್ಷಿ ರುಜುವನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಮಹಜರ್ ವೇಳೆ ಚಾ ಸಾ 2 ಮತ್ತು ಚಾ ಸಾ 3 ರಿಂದ 6 ಸಹ ಸ್ಥಳದಲ್ಲಿದ್ದರು. ಆರೋಪಿಗಳು ಬಂದಿದ್ದ ಹುಂಡೈ ಕಾರಿನ ಫೋಟೋ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಸದರಿ ಕಾರಿನ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 4 ರಿಂದ 7 ಎಂದು ಗುರುತಿಸಲಾಯಿತು. ಆರೊಪಿಗಳು ಕಲ್ಟಿವೇಟರ್ ನಿಂದ ಶೀಟ್ ಮತ್ತು ಕಲ್ಲು ಕೂಚಗಳನ್ನು ಹಾನಿ ಮಾಡಿದ್ದು ಫೋಟೋದಲ್ಲಿ ಅವುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಕಲ್ಟಿವೇಟರ್‌ದ ಜಖಂಗೊಂಡ ಶೀಟ್ ಮತ್ತು ಜಖಂಗೊಂಡ ಕಲ್ಲು ಕೂಚಗಳ ಫೋಟೋ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ 8 ರಿಂದ 10 ಎಂದು ಗುರುತು ಮಾಡಲಾಯಿತು. ಆರೋಪಿಗಳು ಜಖಂಗೊಳಿಸಿದ ಕಲ್ಲು ಕೂಚದ ತುಂಡು, ಹಾಲೋ ಬ್ರಿಕ್ಸ್ ಮತ್ತು ಸಿಮೆಂಟ್ ಶೀಟಿನ ತುಂಡು, ಸೈಜುಗಲ್ಲುಗಳು ತುಂಡುಗಳನ್ನು ನೋಡಿದರೆ ಗುರುತಿಸಬಲ್ಲೆ. ಈ ಹಂತದಲ್ಲಿ ಮಾಲುಗಳನ್ನು ಹಾಜರುಪಡಿಸದೇ ಇರುವುದರಿಂದ ಅವುಗಳ ಗುರುತಿಸುವಿಕೆಗಾಗಿ ಮುಂದುವರಿದ ಮುಖ್ಯ ವಿಚಾರಣೆಗಾಗಿ ಮುಂದೂಡಲಾದಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಪ್ರಶೀಲಾ ಕುಮಾರಿ ಜಿ ಎಸ್)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.